ಸಾಲಿನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಕಟ್ಟಡಕ್ಕೋಸ್ಕರ ಕೊಡಲಾಗಿದೆ, ಮತ್ತು ಪ್ರಗತಿಯಲ್ಲಿರುವ ಕಟ್ಟಡಗಳಿಗೆ ಮೂರು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ, ಅವಶ್ಯಕತೆಯನ್ನು ನೋಡಿಕೊಂಡು ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ವಿಟ್ಲಲದಲ್ಲೂ ಕೂಡ ಒಂದು ಕೈಗಾರಿಕಾ ತರಬೇತಿ ಕೇಂದ್ರವಿದೆ, ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿಗೆ ಕಟ್ಟಡ ಹಾಗೂ ಸಿಬ್ಬಂದಿಯನ್ನು ಒದಗಿಸಿಕೊಡಬೇಕು ಎಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಈಗಾಗಲೇ ಹೇಳಿದ್ದೇನೆ. ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಅತಿ ಶೀಘ್ರವಾಗಿ ಸಿಬ್ಬಂದಿಯನ್ನು ತುಂಬಲು ನಾವು ಪ್ರಯತ್ನ ಮಾಡುತ್ತೇವೆ. ಖಾಲಿ ಇದ್ದರೂ ಕೂಡ ಸಹಿತ ಈಗ ಅಲ್ಲಿ ಗೆಸ್ಟ್ ಲೆಕ್ಚರ್ಸ್ ಕೆಲಸ ಮಾಡುತ್ತಿದ್ದಾರೆ, ಬೋಧಕರು ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯ ಸಮಸ್ಯೆಗಳು

170 (882) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯನ್ನು ನೂರು ಹಾಸಿಗೆಗೆ ಮೇಲ್ದರ್ಜೆಗೇರಿಸಿದ್ದರೂ, ಅದಕ್ಕೆ ತಕ್ಕ ಸಿಬ್ಬಂದಿ ಹುದ್ದೆ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಪದೇ ಪದೇ ವಿದ್ಯುತ್ ಶಾರ್ಟ್ ಸರ್ಕೀಟ್ ಆಗಿ ಉಪಕರಣಗಳು ಸುಟ್ಟುಹೋಗುತ್ತಿರುವುದು ಹಾಗೂ ಆಸ್ಪತ್ರೆ ಆವರಣದ ಬೀದಿ ದೀಪಗಳು ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ದೋಷಪೂರಿತ ವಿದ್ಯುತ್ ವೈರಿಂಗ್ ಕಾರಣವೇ.

ಇ) ಹೌದಾದಲ್ಲಿ ವೈರಿಂಗ್ ಮಾಡಿದ ಗುತ್ತಿಗೆದಾರರಿಂದ ದೋಷ ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಜೆ.ಸಿ. ಆಸ್ಪತ್ರೆಯ ತುರ್ತು ಚಿಕಿತ್ಸಾ ಕೊಠಡಿ ಬಹಳ ಕಿರಿದಾಗಿದ್ದು ಗಾಲಿ ಖುರ್ಚಿ ಒಳಗೆ ತೆಗೆದುಕೊಂಡು ಹೋಗುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೊಠಡಿ ವಿಸ್ತಾರ ಮಾಡಲು ಸರ್ಕಾರ ತಕ್ಷಣ ಕ್ರಮಕೈಗೊಳ್ಳುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಈವರೆಗೆ ಸದರಿ ಆಸ್ಪತ್ರೆಯು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿದ್ದು, ದಿನಾಂಕ: 04.01.2006ರ ಸರ್ಕಾರದ ಆದೇಶದ ಮೇರೆಗೆ ಮೇಲ್ದಜೆಗೇರಿಸಲ್ಪಟ್ಟಿದೆ.

ವಿದ್ಯುತ್ ದೋಷದ ಬಗ್ಗೆ ಗಮನಕ್ಕೆ ಬಂದಿರುವುದಿಲ್ಲ. ದೋಷಪೂರಿತ ವೈರಿಂಗ್‌ನಿಂದ ಆಗಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ದೋಷಪೂರಿತ ವೈರಿಂಗ್‌ನಿಂದ ಆಗಿದ್ದರೆ, ಗುತ್ತಿಗೆ ನಿಯಮಾವಳಿಗಳ ಮೇರೆಗೆ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಈ) ತುರ್ತು ಚಿಕಿತ್ಸಾ ಕೊಠಡಿಯು ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸುಸಜ್ಜಿತವಾದ ಚಿಕಿತ್ಸಾ ಕೊಠಡಿಯನ್ನು ಹಾಗೂ 100 ಹಾಸಿಗೆಗಳಿಗೆ ಅವಶ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹೊಸ ಕಟ್ಟಡದ ನಿರ್ಮಾಣ ಕೈಗೆತ್ತಿಕೊಳ್ಳಲು ಬೇಕಾಗಿರುವ ಅಂದಾಜು ನಕ್ಷೆಯನ್ನು ತಯಾರಿಸಲು ಅಧೀಕ್ಷಕ ಅಭಿಯಂತರರು ಕೆ.ಹೆಚ್.ಎಸ್.ಡಿ.ಪಿ. ಇವರಿಗೆ ಸೂಚಿಸಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ನನ್ನ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ 4.1.2006 ರಿಂದ ನಮ್ಮ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ, ಆದರೆ ಹುದ್ದೆಗಳು ಇನ್ನೂ ಮಂಜೂರಾಗಿಲ್ಲ, ಎಷ್ಟು ಹುದ್ದೆಗಳು ಮಂಜೂರಾಗಿವೆ, ಅದನ್ನು ಯಾವಾಗ ತುಂಬುತ್ತೀರಿ? ವೈದ್ಯರ ಸಂಖ್ಯೆ ಕಡಿಮೆ ಇದೆ, ಎಲ್ಲಕ್ಕಿಂತ ಹೆಚ್ಚಾಗಿ ಗ್ರೂಪ್ (ಡಿ) ತೀರಾ ಕೊರತೆ ಇದೆ, ಆಪರೇಷನ್ ಥಿಯೇಟರ್‌ನಲ್ಲೂ ಕೂಡ ಕೆಲಸ ಮಾಡಲು ಯಾರೂ ಇಲ್ಲ ವಿಶೇಷವಾಗಿ ಸ್ಟಾಫ್‌ನರ್ಸ್ ಕೊರತೆ ಇದೆ. ತುಂಬಾ ದೊಡ್ಡ ಕಟ್ಟಡವಿದೆ, ಯಾವುದೋ ಒಂದು ಮೂಲೆನಲ್ಲಿ ಪೇಶೆಂಟ್‌ಗೆ ಡ್ರಿಪ್ ಹಾಕಿದರೆ ಇನ್ನೊಂದು ಮೂಲೆನಲ್ಲಿ ಡೆಲಿವರಿ ಕೇಸ್ ಇರುತ್ತದೆ, ಒಬ್ಬರೋ ಇಬ್ಬರೋ ಇರುವವರಲ್ಲಿ ರಾತ್ರಿ ಹಾಗೂ ಹಗಲು ಡ್ಯೂಟಿಯಿಂದಾಗಿ ಸ್ಟಾಫ್ ನರ್ಸ್‌ಗಳು ಸುಮಾರು 15–16 ಗಂಟೆಗಳ ಕಾಲ ಈಗ ಇರುವವರು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಸ್ಟಾಫ್ ನರ್ಸ್‌ಗಳನ್ನು ಯಾವಾಗ ಒದಗಿಸುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು. .

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ, ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯನ್ನು ಮೇಲ್ದಜೆಗೆ ಏರಿಸಿ ಡಾಕ್ಟರ್‌ಗಳ ಸಂಖ್ಯೆ ಹಾಗೂ ಪ್ಯಾರಮೆಡಿಕಲ್ ಸ್ಟಾಫ್ ಸಂಖ್ಯೆಯನ್ನೂ ಕೂಡ ಜಾಸ್ತಿ ಮಾಡಿದ್ದೇವೆ. ಅಲ್ಲಿ 9 ಜನ ಸ್ಟಾಫ್ ಇರಬೇಕಾಗಿತ್ತು, 8 ಜನ ಇದ್ದಾರೆ, ಒಂದು ಫಿಜಿಸಿಯನ್ ಹುದ್ದೆ ಮಾತ್ರ ಖಾಲಿ ಇದೆ, ಒಟ್ಟು 73 ಜನ ಪ್ಯಾರಮೆಡಿಕಲ್ ಸ್ಟಾಫ್ ಬರಬೇಕು 45 ಜನ ಇದ್ದಾರೆ 28 ಜನ ಖಾಲಿ ಇದ್ದಾರೆ, ಅಲ್ಲಿ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಸರ್ಕಾರ 500 ಜನ ವೈದ್ಯರನ್ನು ನೇಮಕ ಮಾಡಬೇಕೆನ್ನುವ ಉದ್ದೇಶದಿಂದ ಅಧಿಸೂಚನೆಯನ್ನು ಹೊರಡಿಸಿದ್ದೇವೆ, ನೇಮಕಾತಿಯಾದ ತಕ್ಷಣ ಏನು ಅಪ್‌ಗ್ರೇಡ್ ಆಗಿದೆ ಆ ಹಂತದಲ್ಲಿ ಏನೇನು ಸ್ಯಾಂಕ್ಷನ್ ಪೋಸ್ಟ್ ಇದೆ, ಆ ಎಲ್ಲಾ ವೈದ್ಯಾಧಿಕಾರಿಗಳನ್ನು ತುಂಬಲು ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿ ಉತ್ತರ ತಪ್ಪಾಗಿದೆ, ಬಹುಶಃ 50 ಬೆಡ್ ಹಾಸಿಗೆ ಇರುವ ಸಂಖ್ಯೆಯಲ್ಲಿ ಒಬ್ಬರು ವೈದ್ಯರು ಬರುತ್ತಾರೆನ್ನುವುದನ್ನು ತಾವು ಹೇಳಿದಿರಿ, 100 ಹಾಸಿಗೆಗೆ ಏನು ಆದೇಶ ಮಾಡಿದ್ದೀರಿ, ಆ 100 ಹಾಸಿಗೆಗೆ ಬೇಕಾದ ವೈದ್ಯರು ಎಷ್ಟು ಎಂಬುದು ಗೊತ್ತಾಗುತ್ತಾ ಇಲ್ಲ.

ಶ್ರೀ ಆರ್. ಅಶೋಕ್ : ಈಗಾಗಲೇ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಿದ್ದೇವೆ, ಇದಾದ ತಕ್ಷಣ ನೂರು ಬೆಡ್‌ಗೆ ಏನೇನು ಸ್ಯಾಂಕ್ಷನ್ ಪೋಸ್ಟ್ ಬರುತ್ತದೆ, ಆ ಎಲ್ಲಾ ಡಾಕ್ಟರ್ಸ್ ಹಾಗೂ ಪ್ಯಾರಮೆಡಿಕಲ್ ಸ್ಟಾಫ್ಸ್ ತುಂಬಲು ಸರ್ಕಾರ ಬದ್ಧವಾಗಿದೆ.